# <u>ನಗರಾಭಿವೃದ್ಧಿ ಸಚಿವ ಶ್ರೀ ಭೈರತಿ ಬಸವರಾಜ್ ಭೇಟಿ</u>

## ಬುಡ್ಡ ಜನಾಂಗ, ಹಗಲುವೇಷ, ಕಾಡಸಿದ್ಧರು ಹಾಗು ಮಂಗಳಮುಖಿಯರು ಮೊದಲಾದವರಿಗೆ ದವಸ-ಧಾನ್ಯಗಳ ವಿತರಣೆ.

**ಚಿತ್ರದುರ್ಗ - ಏ. 27 - ಕೇಳುವವರು ನೀಡುವಂತಾಗಬೇಕು. ಸ್ವಂತ ಕಾಲಿನ ಮೇಲೆ ನಿಂತು ದುಡಿಮೆಗೆ ಒಳಗಾಗಿ ಸ್ವಾವಲಂಬಿ ಬದುಕನ್ನು ನಡೆಸಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.**

ಶ್ರೀಮುರುಘರಾಜೇಂದ್ರ ಮಠದಲ್ಲಿಂದು ಬುಡ್ಡ ಜನಾಂಗ, ಹಗಲುವೇಷ, ಕಾಡಸಿದ್ಧರು ಹಾಗು ಮಂಗಳಮುಖಿಯರು ಮೊದಲಾದವರಿಗೆ ದವಸ-ಧಾನ್ಯಗಳನ್ನು ವಿತರಿಸಿ ಮಾತನಾಡಿದ ಶ್ರೀಗಳು, ನೀವೆಲ್ಲ ಉತ್ತಮ ಶಿಕ್ಷಣ ಪಡೆಯುವುದರ ಮೂಲಕ ಅಕ್ಷರ ಸಂಸ್ಕøತಿಗೆ ಒಳಗಾಗಬೇಕು. ಮಂಗಳಮುಖಿಯರು ಶಿಕ್ಷಣವನ್ನು ಪಡೆದು ಉನ್ನತ ಹುದ್ದೆಗಳಲ್ಲಿರುವುದು ಅಭಿನಂದನೀಯ. ವಿದ್ಯಾವಂತರಾದರೆ ಬೇಡುವ ಪರಿಸ್ಥಿತಿ ಬರುವುದಿಲ್ಲ ಎಂದರು.

ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಮಾತನಾಡಿ, ಪ್ರಬುದ್ಧ ಆಲೋಚನೆ, ಮಾನವೀಯ ಕಳಕಳಿಗೆ ಮತ್ತೊಂದು ಹೆಸರು ಮುರುಘಾ ಶರಣರು. ಅವರು ಮೊದಲಿನಿಂದಲೂ ಒಂದಿಲ್ಲ ಒಂದು ವಿಭಿನ್ನ ಆಲೋಚನೆಗಳನ್ನು ಮಾಡುತ್ತ ಬಸವಣ್ಣನವರ ತತ್ತ್ವಸಿದ್ಧಾಂತಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಜನರಲ್ಲಿ ಸದಾ ಜಾಗೃತಿ ಮೂಡಿಸುವುದರೊಂದಿಗೆ ಕಾಯಕ ಪ್ರಜ್ಞೆಗೆ ಅವರನ್ನು ತೊಡಗಿಕೊಳ್ಳುವಂತೆ ಮಾಡುತ್ತ ಹಸಿದವರಿಗೆ ಅನ್ನ ನೀಡುವ ಮಹತ್ತರ ಸಂಸ್ಕøತಿಯನ್ನು ಅಳವಡಿಸಿಕೊಂಡಿದ್ದಾರೆ. ನನಗೆ ಅವಕಾಶ ಮಾಡಿಕೊಟ್ಟಿದ್ದಾಗಿ ಕರ್ನಾಟಕ ಸರ್ಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು. ಸಚಿವರು ಇದಕ್ಕು ಮುನ್ನ ಪೂಜ್ಯಶ್ರೀಗಳಿಂದ ಆಶೀರ್ವಾದ ಪಡೆದರು. ಮಂಗಳಮುಖಿ ಲತೀಕ್ ಮಾತನಾಡಿ, ಇಂದು ಮಂಗಳಮುಖಿಯರು ಎಂದರೆ ಭಿಕ್ಷಾಟನೆ ಎನ್ನುವ ಪರಿಸ್ಥಿತಿ ಇದೆ. ನಮ್ಮಂಥವರನ್ನು ಶ್ರೀಮಠ ಗುರುತಿಸಿ ಹಸಿವಿಗೆ ಒಂದಿಷ್ಟು ಅನ್ನ ನೀಡುತ್ತಿರುವುದು ಸಂತಸವಾಗಿದೆ ಎಂದು ಭಾವುಕರಾದರು.

ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ, ಎಸ್‍ಜೆಎಂ ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಮಂಗಳಮುಖಿಯರ ಮುಖ್ಯಸ್ಥೆ ಚಂದ್ರಕಲಾ, ವಕೀಲರಾದ ಪ್ರತಾಪ್‍ಜೋಗಿ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯನಿರ್ದೇಶಕ ನರೇನಹಳ್ಳಿ ಅರುಣ್‍ಕುಮಾರ್, ಕರ್ನಾಟಕ ರಾಜ್ಯ ಪತ್ರಿಕಾ ಸಂಪಾದಕರ ಸಂಘದ ಅಧ್ಯಕ್ಷ ಟಿ.ತಿಪ್ಪೇಸ್ವಾಮಿ ಸಂಪಿಗೆ, ಜಿಲ್ಲಾ ಅಧ್ಯಕ್ಷ ಹೆಚ್.ಲಕ್ಷ್ಮಣ್, ಅಲೆಮಾರಿ ಸಂಘದ ಅಧ್ಯಕ್ಷ ನಾಗರಾಜ ಮೊದಲಾದವರಿದ್ದರು.











